ತಣ್ಣನೆಯ ನೀರಿನಲ್ಲಿ ಈಜುವುದು... ಡೆನ್ನರು ಚಳಿಗಾಲವನ್ನು ನಿರೀಕ್ಷಿಸುತ್ತಾರೆ. ಎಷ್ಟು ಚಳಿಯೋ, ಅಷ್ಟು ಹಿತ.

ನಾನೂ ಸಹ ಉತ್ಸಾಹದಲ್ಲಿ ಸ್ಟಾರ್ಟಾ ಎಂಬ ಒಂದು ಕ್ಲಬ್‌ಗೆ ಸೇರಿಕೊಂಡೆ. ಈ ಕ್ಲಬ್ ಚಳಿಗಾಲದಲ್ಲಿ ತಣ್ಣನೆಯ ಸಮುದ್ರದಲ್ಲಿ ಈಜುವ ತರಬೇತಿಯನ್ನು ಕೊಡುತ್ತಿತ್ತು. ನಾವು ಡಿಸೆಂಬರ್ ತಿಂಗಳ ಕೊರೆಯುವ ಚಳಿಯಲ್ಲಿ ಮುಂಜಾನೆ ಮತ್ತು ಒಮ್ಮೊಮ್ಮೆ ಸಂಜೆಯ ವೇಳೆಯಲ್ಲಿ ಒಂದು ಗುಂಪಿನಲ್ಲಿ ಕಲೆಯುತ್ತಿದ್ದೆವು. ಮೊದಲು ತೊಂಬತ್ತು ಡಿಗ್ರಿ ಬಿಸಿ 'ಸಾನಾ'ದಲ್ಲಿ (ಈಜುವುದಕ್ಕೆ ಮೊದಲು ಮತ್ತು ನಂತರ ನಗ್ನವಾಗಿ ಇರುವ ಕೋಣೆಯಲ್ಲಿ) ವಿಶ್ರಾಂತಿಯನ್ನು ಪಡೆದು, ನಂತರ ಓಡಿ ಹೋಗಿ ಮಂಜಿನ ಸಮುದ್ರಕ್ಕೆ ಹಾರುತ್ತಿದ್ದೆವು. ಕೆಲವರು ಸ್ವಿಮ್ಮಿಂಗ್ ಸೂಟ್ ಧರಿಸಿದ್ದರೆ, ಕೆಲವರು ನಗ್ನರಾಗಿಯೇ ಹಾರುತ್ತಿದ್ದರು.

ತಣ್ಣನೆಯ ನೀರಿನಲ್ಲಿ ನುಗ್ಗುತ್ತಲೇ ಕರೆಂಟ್ ಹೊಡೆದಂತಾಗುತ್ತಿತ್ತು, ಇಡೀ ಶರೀರದಲ್ಲಿ ವಿದ್ಯುತ್ ಹರಿದಂತಾಗುತ್ತಿತ್ತು. ಆದರೆ ಮೂರ್ನಾಲ್ಕು ಸ್ಟ್ರೋಕ್ ನಂತರ ಥಂಡಿ ಸ್ವಲ್ಪ ಕಡಿಮೆಯಾಗುತ್ತಿತ್ತು. ಯಾರಿಗೆ ಎಷ್ಟು ಹೊತ್ತು ಸಾಧ್ಯವೋ, ಅವರು ಅಷ್ಟು ಹೊತ್ತು, ಈಜುತ್ತಾ ಮುಳುಗೇಳುತ್ತಿದ್ದರು. ನಾನು ಈಜುತ್ತಾ ಅಪಾಯಮಟ್ಟದ ಸೂಚನೆಯನ್ನು ದಾಟಿ ಹೋಗುತ್ತಿದ್ದೆ. ಸಮುದ್ರದಿಂದ ಹೊರ ಬಂದಾಗ ನನ್ನಿಡೀ ಶರೀರ, ಪೂರ್ವಜನ್ಮ ಪಡೆದು ಹೊಸ ಶರೀರವನ್ನು ಪಡೆದಂಥ ಶಿಥಿಲತೆಯನ್ನು ಅನುಭವಿಸುತ್ತಿತ್ತು. ಅದ್ಭುತ ಆನಂದ, ಹೊಸ ಚೈತನ್ಯ ಮೂಡುತ್ತಿತ್ತು.

ಈಜಿನಲ್ಲಿನ ನನ್ನ ವೈಶಿಷ್ಟ್ಯವನ್ನು ನೋಡಿ ಕ್ಲಬ್‌ನ ಸದಸ್ಯರು ಆಶ್ಚರ್ಯಪಡುತ್ತಿದ್ದರು. ನೀರಿನೊಂದಿಗಿನ ನನ್ನ ಸಂಬಂಧ ತುಂಬಾ ಹಳೆಯದು, ನಾನು ಬಾಲ್ಯವನ್ನು ಕಳೆಯುತ್ತಿದ್ದ ಮನೆಯ ಪಕ್ಕದಲ್ಲಿ ನದಿಯೊಂದು ಹರಿಯುತ್ತಿತ್ತು.

ಒಂದು ಕಾಲದಲ್ಲಿ ನಾನು ನದಿಯಾಗಿ, ಸ್ವಚ್ಛಂದಿಂದ ಹರಿಯಲು ಬಯಸುತ್ತಿದ್ದೆ ಎಂದು ಅವರಿಗೆ ಹೇಳಿದೆ. ಆದರೆ ನನ್ನ ಡ್ಯಾನಿಶ್ ಪತಿಗೆ ಈ ಶೀತಕಾಲದ ಸ್ನಾನದಲ್ಲಿ ಆಸಕ್ತಿಯಿರಲಿಲ್ಲ ಎಂಬುದು ದುಃಖದ ಸಂಗತಿಯಾಗಿತ್ತು. ಅವನು ಸೋಮಾರಿಯಂತೆ ಮನೆಯಲ್ಲಿ ಕಂಬಳಿ ಹೊದ್ದು, ಒಂದು ಕಪ್ ಬಿಸಿ ಕಾಫಿಯೊಂದಿಗೆ ತನ್ನ ಫೋನ್‌ನಲ್ಲಿ ಕಳೆದುಹೋಗುವುದನ್ನು ತುಂಬಾ ಇಷ್ಟಪಡುತ್ತಿದ್ದ. ಅವನಿಗೆ ಚಳಿಯಲ್ಲಿ ಸಮುದ್ರ ಸ್ನಾನ ಮಾಡುವುದು ಅಸಂಗತವೆಂದು ಅನ್ನಿಸುತ್ತಿತ್ತು. 'ತಣ್ಣನೆಯ ನೀರಿನಲ್ಲಿ ಈಜುವುದು ಮನರಂಜನೆಯಲ್ಲ, ಇದು ನಮ್ಮ ಶರೀರಕ್ಕೆ ಅಕಾರಣವಾಗಿ ನೋವು ಕೊಡುವುದಾಗಿದೆ' ಎಂದು ಪಾಟಿಸವಾಲು ಹಾಕುತ್ತಿದ್ದ.

ಪತಿ–ಪತ್ನಿಯರಾಗಿದ್ದ ಲಾರ್ಸ್ ಮತ್ತು ನಾನು ಇಬ್ಬರೂ ಒಟ್ಟಿಗೆ ಚರ್ಚ್‌ಗೆ ಹೋಗಬೇಕು, ಒಟ್ಟಿಗೆ ಸ್ವಿಮ್ಮಿಂಗ್ ಮಾಡಬೇಕು ಎಂದು ನನಗೆ ತುಂಬಾ ಆಸೆಯಾಗುತ್ತಿತ್ತು. ನಾನೆಷ್ಟೇ ಹೇಳಿದರೂ ಲಾರ್ಸ್ ಮಿಸುಕಾಡುತ್ತಿರಲಿಲ್ಲ. ನಾನು ಲಾರ್ಸ್‌ಗೆ ಒತ್ತಾಯ ಮಾಡುವುದನ್ನು ನೋಡಿ ಜೋಶುಆ, 'ಮಮ್ಮಿ ನಡಿ, ನಾನು ನಿನ್ನ ಜೊತೆಗೆ ಬರ್ತೀನಿ' ಎನ್ನುತ್ತಿದ್ದ.

ವಯಸ್ಕರು ಮಾತ್ರ ಸ್ಟಾರ್ಟಾ ಕ್ಲಬ್‌ಗೆ ಸದಸ್ಯರಾಗಬಹುದಿತ್ತು. ಜೋಶ್ ನನ್ನೊಂದಿಗೆ ಸ್ವಿಮ್ಮಿಂಗ್ ಮಾಡಲು ಸಾಧ್ಯವಿರಲಿಲ್ಲ. ಆದರೆ ಅವನು ನನ್ನೊಂದಿಗೆ ಬರುವುದು ಯಾರಿಗೂ ಕೆಡುಕೆನಿಸಲಿಲ್ಲ. ಕ್ಲಬ್‌ನ ಹಸನ್ಮುಖಿ ತರಬೇತುದಾರರು ಅವನ ಕೈಕುಲುಕುತ್ತಾ ಹೇಳಿದರು, 'ಯಂಗ್ ಮ್ಯಾನ್... ನೀನಿನ್ನೂ ಚಿಕ್ಕವನು... ಆದರೆ ಕೆಲವು ವರ್ಷಗಳಾದ ನಂತರ ನೀನು ನಮ್ಮ ಕ್ಲಬ್‌ಗೆ ಸೇರಿಕೊಳ್ಳಬಹುದು'.

ಸಮುದ್ರದ ತೀರದಲ್ಲಿ ಬಿದಿರಿನ ರೇಲಿಂಗ್ ಹಿಡಿದು ನಿಂತ ಜೋಶ್ ನಾನು ಈಜುವುದನ್ನು ನೋಡುತ್ತಿದ್ದ. ಸಂಜೆಯ ವೇಳೆಯಾಗಿತ್ತು... ಲಘು ಅಂಧಕಾರ ಕವಿದಿತ್ತು... ಅವನ ಆ ಮುಗ್ಧ ರೂಪ ನನ್ನ ಮೆದುಳಿನಲ್ಲಿ ಸದಾ ಕಾಲಕ್ಕೂ ಸ್ಥಿರವಾಯಿತು. ನಾನು ಅವನಿಗೆ ಹೇಳುತ್ತಿದ್ದೆ, 'ಬಂದು ಬಿಡು, ಇದು ಓಪನ್ ಸೀ... ನೀನೂ ಮುಳುಗು ಹಾಕು...'

ಅವನು ಬೇಡವೆಂದು ತಲೆಯಾಡಿಸುತ್ತಿದ್ದ. ನಾನು ಈಜು ಮುಗಿಸಿ ಹೊರಬಂದಾಗ, ಅವನು ನನ್ನೆಡೆಗೆ ಟವಲ್ ಚಾಚುತ್ತಿದ್ದ. ಸ್ವಲ್ಪ ಬಿಸಿಲು ಮೂಡಿದಾಗ ಜೋಶ್‌ಗೂ ಸಮುದ್ರದಲ್ಲಿ ಈಜುವುದನ್ನು ಕಲಿಸುತ್ತೇನೆ, ನಾವಿಬ್ಬರೂ ಒಟ್ಟಿಗೆ ಈಜುತ್ತೇವೆ. ಅವನು ಅಂತರರಾಷ್ಟ್ರೀಯ ಮಟ್ಟದ ಈಜುಪಟುವಾಗುತ್ತಾನೆ, ಒಲಿಂಪಿಕ್‌ನಲ್ಲಿ ಭಾಗವಹಿಸುತ್ತಾನೆ ಎಂದೆಲ್ಲಾ ಯೋಚಿಸುತ್ತಿದ್ದೆ.

ಓಹ್... ನಾವೆಲ್ಲಾ ಅದೆಷ್ಟು ಪ್ಲಾನ್‌ಗಳನ್ನು ಹೆಣೆಯುತ್ತೇವೆ... ಅವುಗಳಲ್ಲಿ ಅದೆಷ್ಟು ಈಡೇರುತ್ತವೆ... ಅದೆಷ್ಟು ಅರ್ಧಂಬರ್ಧವಾಗಿ ಉಳಿದು ಬಿಡುತ್ತವೆ... ಒಟ್ಟಿನಲ್ಲಿ ನಾನಿಲ್ಲಿ ಸಂತಸದಿಂದಿದ್ದೆ. ಇಲ್ಲಿ ನನಗೆ ನೌಕರಿ ಸಿಕ್ಕಿತ್ತು, ಒಳ್ಳೆಯ ಮಿತ್ರರ ಸಹವಾಸ ಸಿಕ್ಕಿತ್ತು. ನನ್ನ ಜೋಶುಆ ಒಳ್ಳೆಯ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದ. ಲಾರ್ಸ್‌ನ ಪರಿವಾರ ಅವನನ್ನು ಸಹಜವಾಗಿ ಒಪ್ಪಿಕೊಂಡಿತ್ತು. ಆದರೆ ಇಲ್ಲೂ ದೇವರಿಗೆ ನನ್ನ ಸಂತಸವನ್ನು ನೋಡಲಾಗಲಿಲ್ಲ. ಅಬ್ರಾಹಮ್‌ಗೆ ವಿಚ್ಛೇದನ ಕೊಟ್ಟು ಲಾರ್ಸ್‌ನನ್ನು ಪತಿಯನ್ನಾಗಿ ಸ್ವೀಕರಿಸಿದ್ದಕ್ಕೆ ನಾನು ದೊಡ್ಡ ಬೆಲೆಯನ್ನು ತೆರಬೇಕಾಯಿತು.

'ಬೆಲೆ?'

ಜೋಶ್‌ಗೆ ಡೆನ್ಮಾರ್ಕ್‌ನಲ್ಲಿರಲು ಪರ್ಮನೆಂಟ್ ವೀಸಾ ಸಿಗಲಿಲ್ಲ. ಲಾರ್ಸ್‌ನನ್ನು ಮದುವೆಯಾದ ನಂತರ ನಾನು ನನ್ನ ಮತ್ತು ನನ್ನ ಮಗನ ರೆಸಿಡೆಂಟ್ ಪರ್ಮಿಟ್‌ಗಾಗಿ ಇಮಿಗ್ರೇಶನ್‌ನಲ್ಲಿ ಅರ್ಜಿ ಹಾಕಿದ್ದೆವು. ಉತ್ತರ ಬರಲು ಹತ್ತು ತಿಂಗಳು ಹಿಡಿಯಿತು. ನನಗೆ ಡೆನ್ಮಾರ್ಕ್‌ನ ರೆಸಿಡೆಂಟ್ ಪರ್ಮಿಟ್ ಸಿಕ್ಕಿತು, ಆದರೆ ಅವರು ಜೋಶ್ ಇಲ್ಲಿರಲು ಅನುಮತಿಯನ್ನು ಕೊಡಲಿಲ್ಲ. ಅದೊಂದು ದಿನ ಶಾಲೆಯಿಂದ ಮರಳಿ ಬಂದಾಗ ಅಂಚೆಯಿಂದ ಡೆನಿಶ್ ಇಮಿಗ್ರೇಶನ್‌ನಿಂದ ಬಂದ ಪತ್ರ ಸಿಕ್ಕಿತು. ಪತ್ರವನ್ನು ತೆರೆದು ಓದಿದಾಗ, ಅಲ್ಲಿ ಹೃದಯಕ್ಕೆ ಪೆಟ್ಟು ಕೊಡುವಂಥ ಸುದ್ದಿ ಸಿಕ್ಕಿತು. ಡ್ಯಾನಿಶ್ ಇಮಿಗ್ರೇಶನ್ ನನ್ನ ಮಗನನ್ನು ಗಡೀಪಾರು ಮಾಡಿತ್ತು. ಕಠಿಣ ಶಬ್ದಗಳಲ್ಲಿ 'ಜೋಶುಆ ಕೊಕ್ಕನ್ ಕೂಡಲೇ ಡೆನ್ಮಾರ್ಕ್ ಬಿಡಬೇಕು' ಎಂದು ಸೂಚಿಸಿತ್ತು. ನಾನು ಜೋಶ್‌ನನ್ನು ಅಪ್ಪಿಕೊಂಡು ರೋದಿಸಿದೆ. ಅವನಿಲ್ಲದೆ ನಾನು ಹೇಗೆ ಬದುಕಲು ಸಾಧ್ಯ?

ನಾನಿಲ್ಲಿ ಲಾರ್ಸ್, ನನ್ನ ಪತಿಯ ಡಿಪೆಂಡೆಂಟ್ ವೀಸಾ ಮೇಲಿದ್ದೆ. ಲಾರ್ಸ್ ನನ್ನ ಮಗನ ವೀಸಾ ಸ್ಪಾನ್ಸರ್ ಮಾಡುವಲ್ಲಿ ವಿಶೇಷ ಪ್ರಯತ್ನ ಮಾಡಲು ನಿರಾಕರಿಸಿದ್ದನ್ನು ನೋಡಿ ನನಗೆ ತುಂಬಾ ಬೇಸರವಾಯಿತು. 'ನಾನು ಇಮಿಗ್ರೇಶನ್ ಅಧಿಕಾರಿಗಳೊಂದಿಗೆ ಜಗಳ ಮಾಡಲಾರೆ, ನಾನು ಜೋಶ್‌ನ ತಂದೆಯಲ್ಲ, ನಾಳೆ ಏನಾದರೂ ಆದರೆ...' ಎಂದು ಲಾರ್ಸ್ ತರ್ಕಿಸಿದ. ನಾನು ಅವನೊಂದಿಗೆ ಸಾಕಷ್ಟು ಜಗಳ ಮಾಡಿದೆ. ಡ್ಯಾನಿಶ್ ಜನರ ವಿಶೇಷತೆ ಎಂದರೆ, ಅವರು ಒಮ್ಮೆ ಒಂದು ವಿಷಯಕ್ಕೆ 'ಇಲ್ಲ' ಎಂದರೆ ತಲೆಯನ್ನು ಎಷ್ಟೇ ಚಚ್ಚಿಕೊಂಡರೂ ಅವರನ್ನು ಒಪ್ಪಿಸಲು ಸಾಧ್ಯವಿಲ್ಲ.

'ಏಕೆ? ನೀವು ಆತ್ಮನಿರ್ಭರರಾಗಿದ್ದಿರಿ, ನಿಮಗೆ ನಿಮ್ಮ ಸಾಮರ್ಥ್ಯದ ಮೇರೆಗೆ ಇಲ್ಲಿಯ ರೆಸಿಡೆಂಟ್ ಪರ್ಮಿಟ್ ಸಿಕ್ಕಿತ್ತು'.

ಪಾಲ್, ನಾನು ಪ್ರಯತ್ನ ಮಾಡಿದ್ದೆ. ಇಮಿಗ್ರೇಶನ್ ಡಿಪಾರ್ಟ್‌ಮೆಂಟ್‌ನವರು ಬರೇ ಊಹೆ ಮಾಡ್ತಾರೆ. ವೀಸಾ ಪಡೆಯಲು ನನ್ನ ಅಧ್ಯಾಪಕ ವೃತ್ತಿಯ ದಾಖಲೆ ಸಾಲದು ಎಂದು ನನ್ನ ಅರ್ಜಿಯನ್ನು ತಿರಸ್ಕರಿಸಿದರು. ಅದಕ್ಕೇ ನಾನು ಲಾರ್ಸ್‌ನನ್ನು ಅವಲಂಬಿಸಿದ್ದೆ. ಆದರೆ ಅವನು ನನ್ನ ಮಗನ ವೀಸಾ ಬಗ್ಗೆ ತಟಸ್ಥನಾದ.

ಲಾರಾ ಸೋಂಡರಬರ್ಗ್‌ನಲ್ಲಿ ತಮ್ಮ ತಾಯಿಯ ಮನೆಯಲ್ಲಿದ್ದರು. ನಾನು ಅವರಿಗೆ ಫೋನ್ ಮಾಡಿದೆ. ಅವರಲ್ಲಿ, 'ಲಾರ್ಸ್‌ಗೆ ತಿಳಿ ಹೇಳಿ, ಅವನು ಜೋಶುಗೆ ವೀಸಾ ಕೊಡುವಂತೆ ಡೆನಿಶ್ ಇಮಿಗ್ರೇಶನ್‌ಗೆ ಒತ್ತಡ ಹಾಕಲಿ, ತಾನು ಅವನ ಮಲತಂದೆ, ಅವನ ಸಂಪೂರ್ಣ ಜವಾಬ್ದಾರಿ ನನ್ನ ಮೇಲಿದೆ ಎಂದು ಹೇಳಲಿ' ಎಂದೆ.

ಲಾರಾ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾ ಹೇಳಿದರು, 'ನನ್ನನ್ನು ನಿಮ್ಮ ಮಧ್ಯೆ ರೆಫರಿ ಮಾಡಬೇಡ. ನಾನು ಲಾರ್ಸ್‌ಗೆ ಇಂಥ ಬಲಾತ್ಕಾರ ಮಾಡಲಾರೆ. ಅವನು ಮೂವತ್ತೇಳರ ಮನುಷ್ಯನಾಗಿದ್ದು, ಅದು ಅವನ ಪರ್ಸನಲ್ ಮ್ಯಾಟರ್ ಆಗಿದೆ'.

'ಇದು ಅವನ ಪರ್ಸನಲ್ ಮ್ಯಾಟರ್ ಅಲ್ಲ. ಇದು ನನ್ನ ಜೋಶ್‌ನ ಪ್ರಶ್ನೆಯಾಗಿದೆ...' ನಾನು ಕಿರುಚಿದೆ.

'ನಾನು ಇದರ ಮಧ್ಯೆ ಬರಲಾರೆ. ಸ್ಸಾರಿ! ಈ ವಿಷಯವನ್ನು ನೀವು ನೀವೇ ಪರಸ್ಪರ ಬಗೆಹರಿಸಿಕೊಳ್ಳಬೇಕು' ಎಂದು ಲಾರಾ ಸ್ಪಷ್ಟವಾಗಿ ಹೇಳಿದರು.

'ಪ್ಲೀಸ್, ಏನಾದರೂ ಮಾಡಿ... ನಾನು ಮತ್ತು ಜೋಶ್ ಜೀವಮಾನವಿಡಿ ನಿಮಗೆ ಆಭಾರಿಯಾಗಿರುತ್ತೇವೆ' ನಾನು ಅಂಗಲಾಚಿದೆ.

'ಸ್ಸಾರಿ!'

ನನ್ನ ಮನಸ್ಸಿಗೆ ಅತೀವ ದುಃಖವಾಯಿತು. ನನ್ನ ಬಳಿ ಎಲ್ಲವೂ ಇತ್ತು, ಆದರೂ ಮತ್ತೊಮ್ಮೆ ನಾನು